

## ಸೇರಬೇಕಾದ ಸ್ಥಳ

ಗುಂಡ ಇದ್ದ ಬಸ್ ಕಡಿದಾದ ಬೆಟ್ಟ ಪ್ರದೇಶದಲ್ಲಿ ವೇಗವಾಗಿ ಓಡುತ್ತಿತ್ತು. ಪಕ್ಕದಲ್ಲಿ ದೊಡ್ಡ ಪ್ರಪಾತ ಕಾಣುತ್ತಿತ್ತು. ಗುಂಡನಿಗೆ ಭಯವಾಗಿ ಚಾಲಕನಿಗೆ 'ಸ್ವಲ್ಪ ನಿಧಾನವಾಗಿ ಓಡಿಸಿ' ಎಂದ. ಚಾಲಕ ನಗುತ್ತಾ 'ಹೆದರಬೇಡಿ ಹುಚ್ಚಾಸ್ಪತ್ರೆಯಿಂದ ನನ್ನನ್ನು ಕರೆದುಕೊಂಡು ಹೋಗಲು ಡಾಕ್ಟರ್ ಬರುತ್ತಿದ್ದಾರೆ ಅಂತ ಸುದ್ದಿ ಸಿಕ್ಕಿತು. ಅವರು ಬರುವ ಹೊತ್ತಿಗೆ ನಿಮ್ಮನ್ನೆಲ್ಲ ಸೇರ ಬೇಕಾದ ಸ್ಥಳಕ್ಕೆ ತಲುಪಿಸುತ್ತೇನೆ' ಎಂದಾಗ ಗುಂಡನಾದಿಯಾಗಿ ಎಲ್ಲರೂ ಅವಾಕ್ಕಾದರು.

**ಶಂಕರೇಗೌಡ ತುಂಬಕೆರೆ**

## ಅವ್ರನ್ನೂ ಕರ್ಕೊಂಡು ತುಂಬ್ರೀ...!



ಬಿಜಾಪುರದ ನಗರದಲ್ಲಿ ಕೆಲಸ ಮಾಡುತ್ತಿದ್ದ ಶೀನಿಯ ಮನೆಯ ಬೀದಿಯಲ್ಲೇ ಆತನ ಸಹಾಯಕನ ಮನೆ ಇತ್ತು. ಅದೊಂದು ದಿನ ಶೀನಿಯ ಕಚೇರಿ ಜೀಪನ್ನು ರಿಪೇರಿಗೆ ಕೊಟ್ಟಿದ್ದರಿಂದ ಮಧ್ಯಾಹ್ನದ ಊಟ ಮಾಡಿ ಬರಲು ತನಗೆ ಡ್ರಾಪ್ ಕೊಡುವಂತೆ ಶೀನಿ, ಸಹಾಯಕನಿಗೆ ಕೇಳಿದ್ದ. ಅದರಂತೆ ಆತ ತನ್ನ ಸ್ಕೂಟರ್ ಮೇಲೆ ಶೀನಿಯನ್ನು ಮನೆಗೆ ಬಿಟ್ಟು ಬಂದಿದ್ದ. ಅರ್ಧ ಗಂಟೆ ನಂತರ ಮತ್ತೆ ಶೀನಿ ಸಹಾಯಕನ ಮನೆಗೆ ಬಂದಾಗ ಆತ, 'ಒಂದೈದು ಮಿನಿಟ್ ಕೂತಿರಿ. ಈಗ ಬಂದೆ' ಎಂದು ಒಳಗೆ ಹೋಗಿದ್ದ. ಆಗ ಆತನ ಅರ್ಧಾಂಗಿ ರೂಮಿನಿಂದಲೇ ತನ್ನ ಪತಿಗೆ 'ರ್‍ರೀ.. ನಳಾ ಬಂದಾವ ನೀರು ತುಂಬಿ ಇಟ್ಟು ಹೋಗ್ರಿ. ನನಗ ಯಾಕೋ ಸೊಂಟಾ ನೋಯ್ತಾ ಇದೆ' ಎಂದು ಹೇಳುತ್ತಿರುವುದು, ಅದಕ್ಕೆ ಪ್ರತಿಯಾಗಿ ಆಕೆಯ ಪತಿ 'ಏಯ್ ಸುಮ್ನಿರು ಅಲ್ಲಿ ನಮ್ಮ ಸಾಹೇಬ್ರು ಬಂದ್ ಕೂತಾರ' ಎಂದು ಹೇಳಿದಾಗ ಆಕೆ ಅದೇ ಸ್ವರದಲ್ಲಿ 'ಅದಕ್ಕೇನಂತ ಅವ್ರನ್ನೂ ಕರ್ಕೊಂಡು ತುಂಬ್ರೀ...' ಎನ್ನುವ ಮಾತು ಶೀನಿ ಕಿವಿ ಮೇಲೆ ಬಿತ್ತು. ಅವ ಸದ್ದಿಲ್ಲದೇ ಆ ಬಿಸಿಲಲ್ಲಿ ಕಚೇರಿಗೆ ನಡೆದು ಹೋದ.

**ಅರವಿಂದ ಜಿ. ಜೋಷಿ**